# ಐಸಿಸ್‌ನಿಂದ ಮಾರಣಹೋಮ

## ಲಂಕಾ ಸ್ಫೋಟದ ಸಾವಿನ ಸಂಖ್ಯೆ 321ಕ್ಕೆ | ಕರ್ನಾಟಕದ 7 ಮಂದಿ ಬಲಿ

**ಕೊಲಂಬೋ:** ರಕ್ತಪಿಪಾಸುಗಳಾದ ಐಸಿಸ್ ಉಗ್ರರ ಮೂಲೋತ್ಪಾಟನೆ ಆಯಿತೆಂದು ನಿಟ್ಟುಸಿರು ಬಿಡುವ ಮುನ್ನವೇ ದಕ್ಷಿಣ ಏಷ್ಯಾದಲ್ಲಿ ಆ ವಿಷವೃಕ್ಷ ಚಿಗುರೊಡೆದಿರುವುದು ಸಾಬೀತಾಗಿದೆ. ಶ್ರೀಲಂಕಾದಲ್ಲಿ ಈಸ್ಟರ್ ಭಾನುವಾರದಂದು (ಏ. 21) ನಡೆದ ಸರಣಿ ಸ್ಫೋಟಗಳನ್ನು ತಾನೇ ನಡೆಸಿದ್ದಾಗಿ ಐಸಿಸ್ ಘೋಷಿಸಿಕೊಂಡಿದೆ.

ಈ ಕುರಿತಂತೆ, ಪ್ರಕಟಣೆ ನೀಡಿರುವ ಸರ್ಕಾರದ ವಕ್ತಾರರಾದ ರಜಿತಾ ಸೇನರತ್ನೆ, ಲಂಕಾದಲ್ಲಿರುವ ನ್ಯಾಷನಲ್ ತೌಹೀದ್ ಜಮಾತ್ (ಎನ್‌ಟಿಜೆ) ಎಂಬ ಉಗ್ರ ಸಂಘಟನೆಯ ಸಹಾಯದಿಂದ ಸರಣಿ ಸ್ಫೋಟಗಳನ್ನು ನಡೆಸಲಾಗಿದೆ. ಈಸ್ಟರ್ ಭಾನುವಾರ ಆತ್ಮಾಹುತಿ ದಾಳಿ ನಡೆಸಿದವರೆಲ್ಲರೂ ಶ್ರೀಲಂಕಾದ ವಾಸಿಗಳೇ ಆಗಿದ್ದಾರೆ ಎಂದಿದ್ದಾರೆ. ಏತನ್ಮಧ್ಯೆ, ಸರಣಿ ಸ್ಫೋಟಗಳಲ್ಲಿ ಮೃತಪಟ್ಟವರ ಸಂಖ್ಯೆ 321ಕ್ಕೇರಿದೆ.

**ಪ್ರತೀಕಾರದ ಸ್ಫೋಟ:** ಕೆಲವು ವಾರಗಳ ಹಿಂದೆ, ನ್ಯೂಜಿಲೆಂಡ್‌ನ ಕ್ರೈಸ್ಟ್ ಚರ್ಚ್‌ನಲ್ಲಿ ಎರಡು ಮಸೀದಿಗಳ ಮೇಲೆ ನಡೆಸಲಾದ ಮತೀಯ ದಾಳಿಗೆ ಪ್ರತೀಕಾರವಾಗಿ ಶ್ರೀಲಂಕಾದಲ್ಲಿ ಈಸ್ಟರ್ ದಾಳಿಗಳನ್ನು ನಡೆಸಲಾಗಿದೆ ಎಂದು ಶ್ರೀಲಂಕಾದ ರಕ್ಷಣಾ ಇಲಾಖೆಯ ಸಹಾಯಕ ಸಚಿವ ರುವಾನ್ ವಿಜಯವರ್ಧನ ತಿಳಿಸಿದ್ದಾರೆ.

**ದಾಳಿಕೋರರಲ್ಲಿ ಇಬ್ಬರು ಸಹೋದರರು:** ದಾಳಿಕೋರರಲ್ಲಿ ಶ್ರೀಲಂಕಾದ ಇಬ್ಬರು ಮುಸ್ಲಿಂ ಸಹೋದರರಿದ್ದರು ಎಂದು ಲಂಕಾ ಸರ್ಕಾರ ತಿಳಿಸಿದೆ. ಇವರಿಬ್ಬರ ಹೆಸರನ್ನು ಸರ್ಕಾರ ಬಹಿರಂಗಗೊಳಿಸಿಲ್ಲ. 20ರ ಹರೆಯದ ಇವರು, ಕೊಲಂಬೋದಲ್ಲಿ ಮಸಾಲೆ ಪದಾರ್ಥಗಳ ವ್ಯಾಪಾರ ಮಾಡುತ್ತಿರುವ ಶ್ರೀಮಂತ ವ್ಯಾಪಾರಿಯೊಬ್ಬರ ಮಕ್ಕಳು. ಒಬ್ಬಾತ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ತನ್ನನ್ನು ತಾನು ಸ್ಫೋಟಿಸಿಕೊಂಡರೆ, ಮತ್ತೊಬ್ಬ ಸಿನ್ನಮನ್ ಗ್ರಾಂಡ್ ಹೋಟೆಲಿನಲ್ಲಿ ಸ್ಫೋಟಿಸಿಕೊಂಡಿದ್ದಾನೆ. ಈ ಇಬ್ಬರೂ, ಇಸ್ಲಾಮಿಸ್ಟ್ ನ್ಯಾಷನಲ್ ತೌಹೀದ್ ಜಮಾತ್ (ಎನ್‌ಟಿಜೆ) ಸಂಘಟನೆಯ ಸದಸ್ಯರಾಗಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

**ಕ್ಷಮೆ ಕೋರಿದ ಸರ್ಕಾರ:** ಸ್ಫೋಟಗಳ ಬಗ್ಗೆ ಮಾಹಿತಿಯಿದ್ದರೂ ಅವನ್ನು ತಡೆಯುವಲ್ಲಿ ವಿಫಲವಾಗಿದ್ದಕ್ಕೆ ಸರ್ಕಾರದ ಪರವಾಗಿ ಸೇನರತ್ನೆ ಲಂಕಾ ಜನತೆಯ ಕ್ಷಮೆ ಕೋರಿದ್ದಾರೆ. "ಕೆಲ ದಿನಗಳ ಮೊದಲೇ ಗುಪ್ತಚರ ಇಲಾಖೆಯಿಂದ ಸಂಭಾವ್ಯ ಸ್ಫೋಟಗಳ ಬಗ್ಗೆ ಮಾಹಿತಿ ಸಿಕ್ಕಿತ್ತು. ಆದರೆ, ಸ್ಫೋಟಗಳಿಂದ ಜನರನ್ನು ರಕ್ಷಿಸುವಲ್ಲಿ ಸರ್ಕಾರ ಎಡವಿದೆ. ಇದಕ್ಕಾಗಿ ಕ್ಷಮೆ ಕೋರುತ್ತೇವೆ.

ಸ್ಫೋಟದ ಮೃತರಿಗೆ ಸೂಕ್ತ ಪರಿಹಾರ ಹಾಗೂ ಶಿಥಿಲಗೊಂಡಿರುವ ಚರ್ಚ್‌ಗಳ ಪುನರ್ ನಿರ್ಮಾಣದ ಜವಾಬ್ದಾರಿಯನ್ನು ಸರ್ಕಾರವೇ ಹೊರಲಿದೆ" ಎಂದಿದ್ದಾರೆ.

**ಮೌನ ಶ್ರದ್ಧಾಂಜಲಿ:** ಈಸ್ಟರ್ ಸ್ಫೋಟಗಳಲ್ಲಿ ಮಡಿದ ಮೃತರಿಗಳ ಸ್ಮರಣಾರ್ಥ ಮಂಗಳವಾರ ಬೆಳಗ್ಗೆ ಲಂಕಾದಾದ್ಯಂತ ಮೂರು ನಿಮಿಷಗಳ ಕಾಲ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈಸ್ಟರ್ ಭಾನುವಾರದಂದು (ಏ. 21) ಬೆಳಗ್ಗೆ 8:30ಕ್ಕೆ ಸರಿಯಾಗಿ ಮೊದಲ ಸ್ಫೋಟ ಸಂಭವಿಸಿದ್ದ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆ 8:30ಕ್ಕೆ ಸರಿಯಾಗಿ ಮೌನಾಚರಣೆ ಆರಂಭಿಸಲಾಗಿತ್ತು. ಎಲ್ಲಾ ಸರ್ಕಾರಿ ಕಚೇರಿಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಲಾಗಿತ್ತು. ಈ ಶ್ರದ್ಧಾಂಜಲಿಯಲ್ಲಿ ಭಾಗವಹಿಸಿದ್ದ ಎಲ್ಲಾ ಸಾರ್ವಜನಿಕರು, ಅಧಿಕಾರಿಗಳು ತಾವಿರುವ ಸ್ಥಳದಲ್ಲೇ ಎದ್ದು ನಿಂತು ಮೂರು ನಿಮಿಷ ಮೌನಾಚರಣೆ ಸಲ್ಲಿಸಿದರು.

▶ 6ನೇ ಪುಟಕ್ಕೆ



ಅಂತ್ಯ ಸಂಸ್ಕಾರದ ವೇಳೆ ಕುಟುಂಬಸ್ಥರ ಆಕ್ರಂದನ.

### ಮತ್ತಿಬ್ಬರು ಕನ್ನಡಿಗರ ಸಾವು

ಈಸ್ಟರ್ ಸ್ಫೋಟಗಳಲ್ಲಿ ಅಸುನೀಗಿದ ಕರ್ನಾಟಕದವರ ಸಂಖ್ಯೆ 7ಕ್ಕೇರಿದೆ. ಕೊಲಂಬೋದಲ್ಲಿರುವ ಭಾರತೀಯ ರಾಯಭಾರ ಕಚೇರಿ ಈ ಕುರಿತಂತೆ ಟ್ವೀಟ್ ಮಾಡಿದ್ದು, ಎ. ಮರಿಗೌಡ ಮತ್ತು ಎಚ್. ಪುಟ್ಟರಾಜು ಎಂಬ ಮತ್ತಿಬ್ಬರು ಕರ್ನಾಟಕದವರು ಸಾವಿಗೀಡಾಗಿದ್ದಾರೆಂದು ತಿಳಿಸಿದೆ. ಇವರೂ ಸೇರಿದಂತೆ, ಘಟನೆಗಳಲ್ಲಿ ಮೃತಪಟ್ಟ ಭಾರತೀಯರ ಸಾವಿನ ಸಂಖ್ಯೆ 10ಕ್ಕೇರಿದೆ. ಸೋಮವಾರ, ರಮೇಶ್ ಗೌಡ, ಕೆ.ಎಂ. ಲಕ್ಷ್ಮೀನಾರಾಯಣ, ಶಿವಕುಮಾರ್, ಕೆ.ಜಿ. ಹನುಮಂತರಾಯಪ್ಪ ಹಾಗೂ ರಂಗಪ್ಪ ಎಂಬುವರು ಸಾವನ್ನಪ್ಪಿರುವುದು ಖಚಿತವಾಗಿತ್ತು. ಆದರೆ, ಕಾಣೆಯಾಗಿದ್ದ ನಾಗರಾಜ ರೆಡ್ಡಿ, ಮಾರಿಗೌಡ, ಪುಟ್ಟರಾಜು ಅವರ ಬಗ್ಗೆ ಮಾಹಿತಿ ಸಿಕ್ಕಿರಲಿಲ್ಲ. ಆದರೆ, ಮಂಗಳವಾರ, ಮರಿಗೌಡ ಮತ್ತು ಪುಟ್ಟರಾಜು ಅವರು ಸಾವಿಗೀಡಾಗಿರುವುದು ಖಚಿತಗೊಂಡಿದೆ.

### ಭಾರತ ಮಾಹಿತಿ ನೀಡಿತ್ತು: ವಿಕ್ರಮ ಸಿಂಘೆ

ಈಸ್ಟರ್ ಭಾನುವಾರದ ಸರಣಿ ಸ್ಫೋಟಗಳಿಗೆ ಸಂಬಂಧಿಸಿ ತನಗೆ ಸಿಕ್ಕಿದ್ದ ಕೆಲ ಗುಪ್ತಚರ ಮಾಹಿತಿಗಳನ್ನು ಭಾರತವು ಶ್ರೀಲಂಕಾಕ್ಕೆ ನೀಡಿತ್ತು ಎಂದು ಶ್ರೀಲಂಕಾದ ಪ್ರಧಾನಿ ರಣಿಲ್ ವಿಕ್ರಮಸಿಂಘೆ ತಿಳಿಸಿದ್ದಾರೆ. ಮಂಗಳವಾರ, ಎನ್‌ಡಿಟಿವಿಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಈ ವಿಚಾರ ತಿಳಿಸಿರುವ ಅವರು, ಸ್ಫೋಟಗಳು ಸಂಭವಿಸುವ ಸಾಧ್ಯತೆಗಳ ಬಗ್ಗೆ ಭಾರತ ಮಾಹಿತಿ ನೀಡಿತ್ತು. ಆದರೆ, ಅವನ್ನು ತಡೆಯುವಲ್ಲಿ ಲಂಕಾ ಸರ್ಕಾರ ಎಡವಿದೆ ಎಂದು ಹೇಳಿದ್ದಾರೆ. ಸರಣಿ ಸ್ಫೋಟಗಳ ತನಿಖೆ ನಡೆಸುತ್ತಿರುವ ಅಧಿಕಾರಿಗಳು, ಚೀನಾ, ಪಾಕಿಸ್ತಾನದಿಂದಲೂ ಮಾಹಿತಿ ಕಲೆ ಹಾಕುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

### 40 ಶಂಕಿತರ ಬಂಧನ

ಪ್ರಕರಣದ ತನಿಖೆ ಚುರುಕುಗೊಳಿಸಿರುವ ಶ್ರೀಲಂಕಾ ಪೊಲೀಸರು, ಮತ್ತೆ 16 ಮಂದಿಯನ್ನು ವಶಕ್ಕೆ ಪಡೆದಿದ್ದು, ಈವರೆಗೆ ಬಂಧಿಸಲ್ಪಟ್ಟ ಶಂಕಿತರ ಸಂಖ್ಯೆ 40ಕ್ಕೇರಿದೆ. ಇವರಲ್ಲಿ, ಸ್ಫೋಟ ನಡೆದ ಚರ್ಚೊಂದರ ಸಮೀಪ ಅನುಮಾನಾಸ್ಪದವಾಗಿ ನಿಲ್ಲಿಸಲಾಗಿದ್ದ ವ್ಯಾನೊಂದರ ಚಾಲಕನೂ ಸೇರಿದ್ದಾನೆ.

# ಐಸಿಸ್‌ನಿಂದ ಮಾರಣ ಹೋಮ

**1ನೇ ಪುಟದಿಂದ ▶** ಈ ನಡುವೆ, ಘಟನೆಗಳಲ್ಲಿ ಮೃತಪಟ್ಟವರ ಸಾಮೂಹಿಕ ಅಂತ್ಯಕ್ರಿಯೆ ಕೊಲಂಬೋದ ನಾನಾ ಕಡೆ ನಡೆಯಿತು.

**ಮತ್ತೊಂದು ಸ್ಫೋಟದ ಸಂಚು?:** ಭಾರೀ ಪ್ರಮಾಣದ ಸ್ಫೋಟಕಗಳನ್ನು ತುಂಬಿಕೊಂಡಿರುವ ಒಂದು ಟ್ರಕ್ ಮತ್ತು ಒಂದು ವ್ಯಾನು ಕೊಲಂಬೋ ಪ್ರವೇಶಿಸಿವೆ ಎಂಬ ಗುಪ್ತಚರ ಮಾಹಿತಿಗಳು ಬಂದಿರುವ ಹಿನ್ನೆಲೆಯಲ್ಲಿ ಕೊಲಂಬೋದ ಎಲ್ಲಾ ಕಡೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಎಲ್ಲಾ ಪೊಲೀಸ್ ಠಾಣೆಗಳಿಗೂ ಸರ್ಕಾರ ಸೂಚನೆ ರವಾನಿಸಿದೆ. ಕೊಲಂಬೋದಲ್ಲಿರುವ ರಾಷ್ಟ್ರೀಯ ಭದ್ರತಾ ನಿರ್ದೇಶನಾಲಯ ಈ ಸೂಚನೆ ರವಾನಿಸಿದೆ. ಅದರಲ್ಲೂ ಕೊಲಂಬೋ ಬಂದರಿನಿಂದಲೇ ಈ ಟ್ರಕ್ ಮತ್ತು ವ್ಯಾನು ಹೊರಟಿರುವ ಬಗ್ಗೆ ಮಾಹಿತಿ ಇರುವುದರಿಂದ ಈ ಪ್ರಾಂತ್ಯದಲ್ಲಿ ತೀವ್ರ ತಪಾಸಣೆ ನಡೆಸಲಾಗುತ್ತಿದೆ.

**ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಿ:** ಈಸ್ಟರ್ ಸ್ಫೋಟ ನಡೆಸಿ ಅಪಾರ ಸಾವು-ನೋವುಗಳಿಗೆ ಕಾರಣವಾಗಿರುವ ಅಪರಾಧಿಗಳನ್ನು ಶೀಘ್ರವೇ ಪತ್ತೆ ಹಚ್ಚಿ ಅವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸ

ಬೇಕೆಂದು ಕೊ…
ಮಾಲ್ಕೋಮ್…
ಸರ್ಕಾರವನ್ನು ಆಗ್ರ…
ಸೇಂಟ್ ಸೆಬಾ…
ಮಂಗಳವಾರ ಭೇ…
ಬಾರಿಯ ಈಸ್ಟರ್ ಭ…
ದುರ್ದಿನವಾಗಿತ್ತು…
ತಪ್ಪಿತಸ್ಥರನ್ನು ಶಿಕ್ಷಿಸುವ…
ಈ ಬಗ್ಗೆ ಯಾ…
ಕಾನೂನನ್ನು ಕೈಗೆ ತೆ…
ಅವರು ಜನರಲ್ಲಿ…